ದಿನಾಂಕ:**16-11-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಅರ್ಜಿ ಆದೇಶದ ಮೇರೆಗೆ ಪಾಟೀ ಸವಾಲು: ಶ್ರೀ ವೈ.ಹೆಚ್.ಕೆ., ಆರೋಪಿ ಪರ ವಕೀಲರಿಂದ:

ನಾನು ಪಿಯುಸಿವರೆಗೆ ಓದಿದ್ದೇನೆ. ನನಗೆ ಇಂಗ್ಲೀಷ ಓದಲು ಬರೆಯಲು ಬರುತ್ತದೆ ಅಂದರೆ ಅರ್ಥವಾಗುತ್ತದೆ. ನಾನು ದೀಪಾ ಏಜೆನ್ಸಿಯ ಪ್ರೊಪ್ರೈಟರ್ ಆಗಿದ್ದು ಅದರ ನಾತೆಯಿಂದ ನಾನು ಪ್ರಕರಣ ದಾಖಲೆ ಮಾಡಿರುತ್ತೇನೆ. ದೀಪಾ ಏಜೆನ್ಸಿಗೆ ಮುನ್ಸಿಪಾರ್ಟಿ ಪರವಾನಿಗೆ ಜಿಎಸ್‌ಟಿ ಮತ್ತು ಪಿನ್ ಇರುತ್ತದೆ. ಸಂಬಂಧಪಟ್ಟ ಇಲಾಖೆಗೆ ದೀಪಾ ಏಜೆನ್ಸಿಯ ಬಗ್ಗೆ ಪ್ರತಿ ಮಾಹಿತಿಯನ್ನು ತಿಳಿಸುತ್ತೇನೆ. ಪ್ರತಿ ತಿಂಗಳು ತಿಳಿಸುವ ಮಾಹಿತಿಯ ಬಗ್ಗೆ ದಾಖಲೆಗಳು ಇರುತ್ತವೆ. ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಕೋಳಿ ವ್ಯವಹಾರ ದೀಪಾ ಏಜೆನ್ಸಿಯಿಂದ ಆಗಿದೆ ಅಂದರೆ ಹೌದು. ೨೩ ವರ್ಷದ ಹಿಂದೆ ಅಂದರೆ ೨೦೦೩ ರ ಹಿಂದಿನಿಂದಲೂ ದೀಪಾ ಏಜೆನ್ಸಿ ನಡೆಸುತ್ತಿದ್ದೇನೆ. ದೀಪಾ ಏಜೆನ್ಸಿಯಿಂದ ೨೦೦ ಕ್ಕಿಂತ ಹೆಚ್ಚು ಊರುಗಳಲ್ಲಿ ವ್ಯವಹಾರ ಮಾಡಿರುತ್ತೇನೆ. ಒಂದು ಊರಿನಲ್ಲಿ ಒಬ್ಬರು ಅಥವಾ ೧೦ ಕ್ಕಿಂತ ಹೆಚ್ಚು ರೈತರು ಇರಬಹುದು. ಕದರಮಂಡಲಗಿ ಗ್ರಾಮದಲ್ಲಿ ೬-೭ ಜನಕ್ಕೆ ವ್ಯವಹಾರ ಮಾಡಿದ್ದೇನೆ.

ನಮ್ಮ ದೀಪಾ ಏಜೆನ್ಸಿಯಿಂದ ಕೋಳಿ ಫಾರ್ಮಗಳಿಗೆ ಕೋಳಿ ಮರಿಗಳು, ಅದಕ್ಕೆ ಬೇಕಾದ ಸಲಕರಣೆಗಳು ಮತ್ತು ಕೋಳಿಗಳಿಗೆ ಬೇಕಾದ ಮೆಡಿಸಿನ್ ತರಿಸಿ ಕೊಡುತ್ತೇವೆ. ೩೦೦ ಕ್ಕಿಂತ ಹೆಚ್ಚು ಜನರಿಗೆ ನಾನು ಮಾಲುಗಳನ್ನು ಕೊಡುತ್ತೇನೆ. ಕೆಲವೊಂದು ಸಮಯದಲ್ಲಿ ಕ್ಯಾಶ್ ಕೊಡುತ್ತಿದ್ದು, ಕೆಲವೊಂದು ಸಮಯದಲ್ಲಿ ಉದ್ರಿ ಕೊಡುತ್ತಿದ್ದು, ಅದಕ್ಕೆ ಚೀಟಿ ಕೊಡುತ್ತಿದ್ದೆವು. ಕೋಳಿಗಳನ್ನು ತರಿಸಿ ಕೊಟ್ಟ ಮೇಲೆ ಅವುಗಳನ್ನು ತರಿಸಿ ಕೊಟ್ಟು ಮಾರಾಟ ಮಾಡುತ್ತಿರಲಿಲ್ಲ. ತೆಗೆದುಕೊಂಡವರೇ ಮಾರಾಟ ಮಾಡುತ್ತಿದ್ದರು. ನಾವು ಮಾಡುವ ವ್ಯವಹಾರಕ್ಕೆ ಯಾವುದೇ ಒಪ್ಪಂದ ಇರಲಿಲ್ಲ. ಅವರ ಮತ್ತು ನಮ್ಮ ನಡುವಿನ ಒಂದು ಬಾಂಧವ್ಯದ ಮೇಲೆ ವ್ಯವಹಾರ ಮಾಡುತ್ತಿದ್ದೆವು. ಭದ್ರತೆಗಾಗಿ ಯಾವುದೇ ಚೆಕ್ಕಗಳನ್ನು ಪಡೆದಿಲ್ಲ.

ಈ ರೀತಿ ಮಾಡುವ ವ್ಯವಹಾರಕ್ಕೆ ಸಂಬಂಧಿಸಿದಂತೆ ರೈತರ ಕಡೆಯಿಂದ ಚೆಕ್ಕುಗಳನ್ನು ಪಡೆಯುತ್ತಿದ್ದೆ ಅಂದರೆ ಸರಿಯಲ್ಲ. ಈ ರೀತಿ ಮಾಡುವ ವ್ಯವಹಾರಕ್ಕೆ ಸಂಬಂಧಿಸಿದಂತೆ ಸುಮಾರು ೧೦೦-೧೫೦ ಪ್ರಕರಣ ಇವೆ ಅಂದರೆ ಸರಿಯಲ್ಲ. ೩೫-೪೦ ಪ್ರಕರಣ ಇವೆ. ಆ ಎಲ್ಲ ಪ್ರಕರಣಗಳು ಚೆಕ್‌ಗೆ ಸಂಬಂಧಿಸಿದ್ದು ಇವೆ ಅಂದರೆ ಸರಿ. ಆ ರೀತಿ ೩೫-೪೦ ಪ್ರಕರಣಗಳಲ್ಲಿ ೧ ರಿಂದ ೨ ಕೋಟಿ ಆಗುತ್ತದೆ ಅಂದರೆ ಸರಿಯಲ್ಲ. ೧ ಕೋಟಿ ಒಳಗೆ ಆಗುತ್ತದೆ ಎಂದು ಹೇಳುತ್ತಾರೆ. ಈ ರೀತಿ ರೈತರ ಜೊತೆ ವ್ಯವಹಾರ ಮಾಡುತ್ತಿರುವಾಗ ರಸೀದಿಗಳನ್ನು ನೀಡುತ್ತಿದ್ದೀರಿ ಅಂದರೆ ರೈತರ ನಮ್ಮ ಜೊತೆ ಯಾವ ರೀತಿ ವ್ಯವಹಾರ ಮಾಡುತ್ತಿದ್ದರು ಆ ರೀತಿ ದಾಖಲೆ ನೀಡುತ್ತಿದ್ದೆ. ರಸೀದಿ ನೀಡಿದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಅಂದರೆ ೧೦ ವರ್ಷ ಆಗಿದ್ದರಿಂದ ನನಗೆ ನೆನಪಿಲ್ಲ. ಆದಾಯ ಮತ್ತು ವಾಣಿಜ್ಯ ತೆರಿಗೆ ಇಲಾಖೆಗೆ ಸಲ್ಲಿಸುತ್ತಿದ್ದ ಬಗ್ಗೆ ದಾಖಲೆಯನ್ನು ಹಾಜರು ಮಾಡಿರುತ್ತೀರಿ ಅಂದರೆ ಹಾಜರು ಮಾಡಿರುತ್ತೇನೆ. ನಿಮ್ಮ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಾಗೂ ಆದಾಯ ತೆರಿಗೆಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಅಂದರೆ ಹಾಜರು ಪಡಿಸಿರುತ್ತೇನೆ. ದೀಪಾ ಏಜೆನ್ಸಿಗೆ ಸಂಬಂಧಿಸಿದಂತೆ ಇದುವರೆಗಿನ ಎಲ್ಲ ವ್ಯವಹಾರದ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ ಅಂದರೆ ಹಾಜರು ಪಡಿಸುತ್ತೇನೆ.

ಆರೋಪಿ ಜೊತೆ 2011 ರಿಂದ ವ್ಯವಹಾರ ಮಾಡಿದ್ದೇನೆ. 10 ವರ್ಷ ಆಗಿದ್ದರಿಂದ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು 2010-11 ಇರಬಹುದು. ಆರೋಪಿಯ ಜೊತೆ ನಿಮ್ಮ ವ್ಯವಹಾರ 2004-05, 2009-10 ರವರೆಗೆ ಇರುತ್ತದೆ ಅಂದರೆ ಸುಳ್ಳು. ಆರೋಪಿಯ ಜೊತೆ ವ್ಯವಹಾರ ಮಾಡುತ್ತಿದ್ದರಿಂದ ಭದ್ರತೆಗಾಗಿ ಚೆಕ್ ಗಳನ್ನು ಪಡೆದಿರುತ್ತೀರಿ ಅಂದರೆ ಸರಿಯಲ್ಲ. ಆರೋಪಿ ಜೊತೆ ಮಾಡಿದ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವ ದಾಖಲೆಯನ್ನು ಹಾಜರು ಪಡಿಸಿದ್ದೀರಿ ಅಂದರೆ 10 ವರ್ಷ ಆಗಿದ್ದರಿಂದ ನೆನಪಿರುವುದಿಲ್ಲ, ಹಾಜರು ಪಡಿಸಿದ್ದೇನೆ. ನಿಮ್ಮ ದೂರಿನಲ್ಲಿ ಆರೋಪಿಯ ಜೊತೆ ಮಾಡಿಕೊಂಡ ವ್ಯವಹಾರದ ಬಗ್ಗೆ ಎಲ್ಲ ದಾಖಲೆಗಳನ್ನು ಹಾಜರು ಪಡಿಸಿರುವುದಿಲಾಲ್ಲ ಅಂದರೆ ಹಾಜರು ಪಡಿಸುತ್ತೇನೆ.

ಆರೋಪಿ 2004-05, 2009-10 ರವರೆಗೆ ವ್ಯವಹಾರ ಮಾಡಿದ್ದು, ನಂತರ ಯಾವುದೇ ವ್ಯವಹಾರ ಮಾಡಿಲ್ಲ ಅಂದರೆ 2014 ರವರೆಗೆ ಮಾಡಿದ್ದಾರೆ. ಆರೋಪಿಗೆ ಮೊದಲಿಗೆ 3 ರಿಂದ 3-30 ಲಕ್ಷದವರೆಗೆ ವ್ಯವಹಾರ ಮಾಡುತ್ತಿದ್ದು ನಂತರ 6 ಲಕ್ಷದವರೆಗೆ ವ್ಯವಹಾರ ಮಾಡಿದ್ದೇನೆ. ಈಗ ತೋರಿಸುತ್ತಿರುವ 21 ರಸೀದಿಗಳು ನಿಮ್ಮ ಏಜೆನ್ಸಿಗೆ ಸಂಬಂಧಿಸಿದ್ದು ಅಂದರೆ ಹೌದು. ಅವುಗಳನ್ನು ನಿಡಿ-1 ರಿಂದ 21 ಅಂತಾ ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಂತರ ಮಾಡಿದ ವ್ಯವಹಾರದ ದಾಖಲೆಗಳನ್ನು ಹಾಜರು ಪಡಿಸುತ್ತೇನೆ. ಈ ಆರೋಪಿ 2009-10 ರ ನಂತರ ನಿಮ್ಮ ಜೊತೆ ಯಾವುದೇ ವ್ಯವಹಾರ ಮಾಡಿಲ್ಲ ಅಂದರೆ ಸರಿಯಲ್ಲ. ಈ ಹಿಂದೆ ಆದ ವ್ಯವಹಾರಕ್ಕೆ ಸಂಬಂಧಿಸಿದಂತೆ ಭದ್ರತೆಗಾಗಿ ಪಡೆದ ಚೆಕ್‌ನ್ನು ಆರೋಪಿಯಿಂದ ಬೆದರಿಸಿ ಹಣ ಪಡೆಯಬೇಕು ಅಂತಾ ಹೇಳಿ ಸುಳ್ಳು ಪ್ರಕರಣ ದಾಖಲೆ ಮಾಡಿದ್ದೇನೆ ಅಂದರೆ ಸರಿಯಲ್ಲ. ಆ ರೀತಿ ಭದ್ರತೆಗಾಗಿ 2 ಚೆಕ್‌ಗಳನ್ನು ಪಡೆದಿರುತ್ತೀರಿ ಅಂದರೆ ಸರಿಯಲ್ಲ. ಆ ರೀತಿ ಪಡೆದ 2 ಚೆಕ್‌ಗಳಲ್ಲಿ ಒಂದು ಚೆಕ್‌ನ್ನು ಅವರ ಅಣ್ಣನ ಹೆಸರಲ್ಲಿ, ಇನ್ನೊಂದು ಚೆಕ್‌ನ್ನು ಈ ಆರೋಪಿಯ ಹೆಸರಲ್ಲಿ ಹಾಕಿ ದುರುಪಯೋಗ ಪಡಿಸಿರುತ್ತೀರಿ ಅಂದರೆ ಸರಿಯಲ್ಲ. ಈ ಆರೋಪಿ ಎಷ್ಟು ಮೊತ್ತದ ವ್ಯವಹಾರ ಮಾಡಿರುತ್ತೀರಿ ಅಂದರೆ 10 ವರ್ಷ ಆಗಿದ್ದರಿಂದ ನೆನಪಿಲ್ಲ, ಕಾಗದ ಪತ್ರಗಳನ್ನು ಹಾಜರು ಪಡಿಸುತ್ತೇನೆ. ಕೊನೆಯದಾಗಿ ಎಷ್ಟು ಹಣ ಬಾಕಿ ಇರುತ್ತದೆ ಅಂದರೆ 4,25,000/-.

4,25,000/- ಬಾಕಿ ಇದ್ದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸುತ್ತೇನೆ. 2009-10 ರ ನಂತರ ಆರೋಪಿ ವ್ಯವಹಾರ ಮಾಡುವುದನ್ನು ನಿಲ್ಲಿಸಿದ್ದು, ಯಾವುದೇ ವ್ಯವಹಾರ ಬಾಕಿ ಇರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಪ್ಯಾರಾ ನಂಬರ 2 ರಲ್ಲಿ ಆರೋಪಿಗೆ ಹಣ ಕೇಳಲು ಹೋಗಿರುತ್ತೇನೆ, ಕಳಿಸಿರುತ್ತೇನೆ ಅಂತಾ ಹೇಳಿದ್ದು, ಯಾವ ದಿನಾಂಕದಂದು ಹೋಗಿರುತ್ತೀರಿ ಅಂದರೆ 10 ವರ್ಷ ಆಗಿದ್ದರಿಂದ ನೆನಪಿಲ್ಲ. ಆರೋಪಿಯಿಂದ ಯಾವುದೇ ಹಣ ಬರಬೇಕಾಗಿಲ್ಲದಿದ್ದರೂ ಕೂಡ ಸುಳ್ಳು ಪ್ರಕರಣ ದಾಖಲೆ ಮಾಡಿರುತ್ತೀರಿ ಅಂದರೆ ಸರಿಯಲ್ಲ.

ಪಿಡಬ್ಲ್ಯೂ-1

ನಿಪಿ-2 ರಲ್ಲಿರುವ ಕೈಬರಹಗಳು ನನ್ನದಲ್ಲ. ನಿಪಿ-2 ರಲ್ಲಿರುವ ಜಮಾಕರ್ತರ ರುಜು ನನ್ನದಲ್ಲ. ಆರೋಪಿಯೇ ಬ್ಯಾಂಕಿಗೆ ಬಂದು ಚೆಕ್‌ನ್ನು ಜಮಾ ಮಾಡಲು ಕೊಟ್ಟಿರುತ್ತಾರೆ. ಆರೋಪಿಯೇ ಬ್ಯಾಂಕಿಗೆ ಬಂದು ಚೆಕ್‌ನ್ನು ಜಮಾ ಮಾಡಲು ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-4 ರಲ್ಲಿ ಯಾರು ನೋಟಿಸು ಕೊಟ್ಟಿರುತ್ತಾರೆ ಅಂದರೆ ಸೀಲು, ಸಹಿ ಇರುವುದಿಲ್ಲ ಅಂದರೆ ಇರುವುದಿಲ್ಲ. ಆರೋಪಿ ನಿಮ್ಮ ಜೊತೆ ವ್ಯವಹಾರ ಮಾಡಿಲ್ಲ, ಯಾವುದೇ ಹಣ ಕೊಡಬೇಕಾಗಿಲ್ಲ, ಈ ಎಲ್ಲ ಮಾಹಿತಿಗಳು ತಮಗೆ ತಿಳಿದಿದ್ದರೂ ಕೂಡ ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಪ್ರಕರಣ ದಾಖಲೆ ಮಾಡಿರುತ್ತೀರಿ ಅಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲ ಮಾಹಿತಿಗಳು ಸುಳ್ಳು ಅಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ- **16-11-2024**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.